ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಹೆಚ್ಚುವರಿ ಜೆಎಂಎಫ್ ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆಃ 610/2024

ಪಿ ಡಬ್ಲ್ಯೂಃ 1
ಸಿ ಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಅಪ್ಸರಾಬೇಗಂ |
| ತಂದೆಯ ಹೆಸರು | : | ಮಕ್ತೂರಸಾಬ್ |
| ವಯಸ್ಸು | : | 29 |
| ಉದ್ಯೋಗ | : | ಅಬಕಾರಿ ಉಪನಿರೀಕ್ಷಕರು |
| ವಾಸಸ್ಥಳ | : | ಹೊನ್ನಾಳಿ |

ದಿನಾಂಕಃ 21-05-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು ದಿನಾಂಕ 05-02-2024 ರಿಂದ 10-06-2024 ರ ವರೆಗೆ ಅಬಕಾರಿ ಉಪನಿರೀಕ್ಷಕರಾಗಿ ರಾಣೇಬೆನ್ನೂರಿನ ಅಬಕಾರಿ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 27-04-2024 ರಂದು ಲೋಕಸಬಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಅಬಕಾರಿ ಅಕ್ರಮಗಳ ಪತ್ತೆಗಾಗಿ ಸಿಬ್ಬಂದಿಗಳೊಂದಿಗೆ ಇಲಾಖಾ ವಾಹನ ಸಂಖ್ಯೆ ಕೆಎ-27/ಜಿ-397 ರಲ್ಲಿ ರಾಣೇಬೆನ್ನೂರು ಶಹರದ ಕುರುಬಗೇರಿ ಕ್ರಾಸ್ ಹತ್ತಿರ ಗಸ್ತು ನಿರ್ವಹಿಸುತ್ತಿದ್ದಾಗ ಸಂಜೆ 05-10 ಸಮಯಕ್ಕೆ ಖಚಿತ ಬಾತ್ಮಿ ಬಂದಿದ್ದು ಮಾಹಿತಿಯನ್ನು ಖಚಿತಪಡಿಸಿಕೊಂಡು, ಉಕ್ಕುಂದ ಸರ್ವಂದ ಟೆಂಪೋ ಸ್ಟಾಂಡ್ ಬಳಿ ಇಲಾಖಾ ವಾಹನವನ್ನು ನಿಲ್ಲಿಸಿ ಘಟನಾ ಸ್ಥಳವನ್ನು ವೀಕ್ಷಣೆ ಮಾಡುತ್ತಿದ್ದೆವು. ಸದರಿ ಜಾಗದಲ್ಲಿ ಇದ್ದ ಇಬ್ಬರು ವ್ಯಕ್ತಿಗಳಾದ ಬಸಪ್ಪ ಮತ್ತು ಹನುಮಂತಪ್ಪ ಎಂಬುವರನ್ನು ಪಂಚರಾಗಿ ನೇಮಿಸಿಕೊಂಡು ಮಾಹಿತಿ ತಿಳಿಸಿರುತ್ತೇವೆ. ಸದರಿ ವೀಕ್ಷಣೆ ಸಮಯದಲ್ಲಿ ಒಬ್ಬ ವ್ಯಕ್ತಿಯು ಭುಜದ ಮೇಲೆ ಚೀಲವನ್ನು ಇಟುಟಕೊಂಡು ಬರುವುದನ್ನು ಗಮನಿಸಿ ಆ ವ್ಯಕ್ತಿಯನ್ನು ತಡೆದು ನಿಲ್ಲಿಸಿ ಪರಿಶೀಲಿಸಲಾಗಿ ಆ ವ್ಯಕ್ತಿಯು ಸದರಿ ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕ್ಗಳು ಇರುವುದಾಗಿ ತಿಳಿಸಿರುತ್ತಾನೆ. ನಂತರ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಬಿಳಿ ಮಿಶ್ರಿತ ಕೇಸರಿ ಬಣ್ಣದ ವಿಮಲ್ ಪಾನ್ ಮಸಾಲ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಮಿಲಿಯ 96 ಹೈವರ್ಡ್ಸ್ ಚಿಯರ್ಸ ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಒಟ್ಟು 8.64 ಲೀಟರ್ ಮದ್ಯ ಕಂಡು ಬಂದಿರುತ್ತದೆ. ಅದರಲ್ಲಿರುವ ಭದ್ರತಾ ಚೀಟಿಗಳ ಸಂಖ್ಯೆಯನ್ನು ಕಪ್ಪು ಶಾಹಿಯಿಂದ ಅಳಿಸಲಾಗಿರುತ್ತದೆ. ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ಮಂಜಪ್ಪ ಕರಿಯಪ್ಪ ಎಂದು

ತಿಳಿದು ಬಂದಿರುತ್ತದೆ. 90 ಮಿಲಿಯ 30 ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಇಲಾಖಾ ಮೊಹರು ಹಾಕಿ ಸೀಲ್ ಸಂಖ್ಯೆ 661 ರಲ್ಲಿ ಸೀಲ್ ಮಾಡಲಾಗಿರುತ್ತದೆ.

ಸದರಿ ವ್ಯಕ್ತಿಗೆ ಅಬಕಾರಿ ಅಕ್ರಮದ ಬಗ್ಗೆ ತಿಳಿಸಿ ಸದರಿ ವ್ಯಕ್ತಿಯ ಕಲಂ 41 ಎ ಸಿ.ಆರ್.ಪಿ.ಸಿ. ಅಡಿ ನೋಟೀಸ್ ಜಾರಿಗೊಳಿಸಲಾಯಿತು. ಪಂಚನಾಮೆಯನ್ನು ಪಂಚರ ಸಮಕ್ಷಮ 05-30 ರಿಂದ 06-30 ರ ವರೆಗೆ ಜರುಗಿಸಲಾಯಿತು. ಚಾ ಸಾ 4 ರವರು ಪಂಚನಾಮೆಯನ್ನು ಬರೆದಿರುತ್ತಾರೆ. ಪಂಚರು ಹಾಗೂ ನಾನು ಸಹಿ ಮಾಡಿರುತ್ತೇವೆ. ನಂತರ ಠಾಣೆಗೆ ತೆರಳಿ ಸ್ವ ದೂರನ್ನು ನೀಡಿ ಪ್ರ ವ ವರದಿಯನ್ನು ದಾಖಲಿಸಿರುತ್ತೇನೆ.

ಶೋಧನಾ ಸಮುಚಿತ ಆಧಾರವನ್ನು ನಿಪಿ 1 ಎಂದು, ಪಂಚನಾಮೆಯನ್ನು ನಿಪಿ 2 ಎಂದು, ಅದರಲ್ಲಿರುವ ಸಹಿಯನ್ನು ನಿಪಿ 2 ಎ ಎಂದು, ಸ್ವ ದೂರನ್ನು ನಿಪಿ 3 ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ 4 ಎಂದು ಗುರುತಿಸಲಾಯಿತು. ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಮು.ಮಾ.1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>**

ದಿನಾಂಕ 27-04-2024 ರಂದು ಆರೋಪಿಯು ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿರುತ್ತಾರೆ. ಅಪರಿಚಿತ ವ್ಯಕ್ತಿಯಿಂದ ಅಕ್ರಮ ಮದ್ಯ ಸಾಗಾಟದ ಬಗ್ಗೆ ಮಾಹಿತಿ ಬಂದಿರುತ್ತದೆ. ಮಾಹಿತಿ ಬಂದ ಮೇಲೆ ನೇರವಾಗಿ ನಾನೇ ಘಟನಾ ಜಾಗಕ್ಕೆ ಹೋಗಿರುತ್ತೇನೆ. ಗಸ್ತು ಕಾರ್ಯ ಮಾಡುವಾಗ ಸಮಯ ಸಂಜೆ 05-05 ಆಗಿತ್ತು. ಘಟನಾ ಸ್ಥಳಕ್ಕೆ ತೆರಳಿದಾಗ ಸಂಜೆ 05-10 ಸಮಯ ಆಗಿತ್ತು. ಉಕ್ಕುಂದ ಸರ್ವಂದ ಚಕ್ ಪೋಸ್ಟ್ ಬಳಿ ಘಟನೆ ನಡೆದಿರುತ್ತದೆ. ಪಂಚರಾದ ಬಸಪ್ಪ ಬಸವಂತಪ್ಪ ಹೆಡಿಯಾಲ, 30 ವರ್ಷ, ಉಕ್ಕುಂದ ಗ್ರಾಮ, ಬೀಡಾ ಅಂಗಡಿ ವ್ಯಾಪಾರಿ ಮತ್ತು ಹನುಮಂತಪ್ಪ ಶೇಕಪ್ಪ ಬಾಲಣ್ಣನವರ, 40 ವರ್ಷ, ಟೆಂಪೋ ಚಾಲಕ, ಉಕ್ಕುಂದ ಗ್ರಾಮದವರಾಗಿರುತ್ತಾರೆ. ಪಂಚರನ್ನು ಪರಿಚಯ ಮಾಡಿಕೊಂಡಾಗ ಸಮಯ 05-15 ಆಗಿರುತ್ತದೆ. ಆರೋಪಿಯು ಬಿಳಿ ಮಿಶ್ರಿತ ಕೇಸರಿ ಬಣ್ಣದ ವಿಮಲ್ ಪಾನ್ ಮಸಾಲ ಬಟ್ಟೆ ಚೀಲದಲ್ಲಿ ಮದ್ಯ ಸಾಗಾಟ ಮಾಡುತ್ತಿದ್ದರು. ಆರೋಪಿಯು ಉತ್ತರದಿಂದ ದಕ್ಷಿಣ ದಿಕ್ಕಿಗೆ ಬರುತ್ತಿದ್ದರು. ಸದರಿ

ವ್ಯಕ್ತಿಯು ಚೀಲ ಹೊತ್ತುಕೊಂಡು ಬರುವಾಗ ಯಾವುದೇ ಪೋಟೋವನ್ನು ತೆಗೆದಿರುವುದಿಲ್ಲ. ಘಟನಾ ಸ್ಥಳದ ಪೂರ್ವಕ್ಕೆ ಕುರುಬಗೇರಿ ಕ್ರಾಸ್, ಪಶ್ಚಿಮಕ್ಕೆ ಚೇತನಾ ಹೋಟೆಲ್, ಉತ್ತರಕ್ಕೆ ಪ್ರಕಾಶ್ ಟೈಲರ್ ಅಂಗಡಿ ಹಾಗೂ ದಕ್ಷಿಣಕ್ಕೆ ಉಕ್ಕುಂದ ಸರ್ವಂದ ಚೆಕ್ ಪೋಸ್ಟ್ ಇರುತ್ತದೆ. ಸದರಿ ಜಾಗವು ಜನ ಸಂದಣಿಯಿಂದ ಕೂಡಿರುತ್ತದೆ ಎಂದರೆ ಸರಿ. ಸದರಿ ಜಾಗದಲ್ಲಿ ಸಂತೆ ಯಿಂದ ಚೀಲವನ್ನು ಹೊತ್ತುಕೊಂಡು ಓಡಾಡುತ್ತಾರೆ ಎಂದರೆ ಸರಿ. ಮುದ್ದೆ ಮಾಲುಗಳಲ್ಲಿದ್ದ ಲೇಬಲ್ ನಂಬರ್ ನ್ನು ಕಪ್ಪು ಶಾಹಿಯಿಂದ ಅಳಿಸಲಾಗಿರುತ್ತದೆ. ಮುದ್ದೆ ಮಾಲುಗಳನ್ನು ಯಾವ ಅಂಗಡಿಯಿಂದ ಖರೀದಿ ಮಾಡಿರುವುದಾಗಿ ಆರೋಪಿಯನ್ನು ವಿಚಾರಿಸಿರುವುದಿಲ್ಲ. ಆರೋಪಿಯು ಅಕ್ರಮವಾಗಿ ಮದ್ಯ ಸಾಗಾಟ ಮಾಡದೇ ಇದ್ದರೂ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಮೇಲಧಿಕಾರಿಗಳ ಆದೇಶದ ಮೇರೆಗೆ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾ.ದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.

C/c. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.